ರಿಯಾಯಿತಿ ಪಾಸ್‌ಗಳಿಂದ ಕೆ.ಎಸ್‌ಆರ್.ಟಿ.ಸಿಗೆ ನಷ್ಟ

580 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಇದುವರೆವಿಗೆ ವಿವಿಧ ರೀತಿಯ ಹಲವಾರು ರಿಯಾಯಿತಿ ಪಾಸುಗಳನ್ನು ವಿತರಿಸಿರುವುದು?*

ಆ) *ಈ ರಿಯಾಯಿತಿ ಪಾಸ್‌ಗಳಿಂದ ಆಗುತ್ತಿರುವ ವಾರ್ಷಿಕ ನಷ್ಟ?*

ಇ) *ರಿಯಾಯಿತಿ ಪಾಸ್‌ಗಳಿಗಾಗಿ 1996-97ನೇ ಸಾಲಿನಲ್ಲಿ ಪೋಲೀಸ್ ಇಲಾಖೆ ಮತ್ತು ಸರ್ಕಾರದಿಂದ ಮರುಪಾವತಿಯಾದ ಹಣ.*

ಈ) *1996-97ನೇ ಸಾಲಿನಲ್ಲಿನ ರಿಯಾಯಿತಿ ಪಾಸ್‌ಗಳ ಒಟ್ಟು ಮೊತ್ತ?*

ಉ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಿಯಾಯಿತಿ ಪಾಸ್‌ಗಳ ಶೇ. 75ರಷ್ಟು ವೆಚ್ಚವನ್ನು ಪಡೆಯಲು ಒತ್ತಾಯಿಸಿದೆಯೇ?*

ಊ) *ಹಾಗಿದ್ದಲ್ಲಿ 1997-98ನೇ ಸಾಲಿಗೆ ರಿಯಾಯಿತಿ ಪಾಸ್‌ಗಳ ಶೇ. 75ರಷ್ಟು ವೆಚ್ಚವನ್ನು ಮರುಪಾವತಿ ಮಾಡಲು ಸರ್ಕಾರ ಒಪ್ಪಿದೆಯೇ?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಇದುವರೆವಿಗೆ ಈ ಕೆಳಕಂಡ ರಿಯಾಯಿತಿ ಪಾಸುಗಳನ್ನು ವಿತರಿಸುತ್ತಿದೆ.

1. ವಿದ್ಯಾರ್ಥಿಗಳ ಪಾಸು
2. ಪತ್ರ ಕರ್ತರ ಪಾಸ್
3. ಅಂಧರ ಪಾಸ್(ಉಚಿತ)
4. ಸ್ವಾತಂತ್ರ್ಯ ಯೋಧರ ಪಾಸ್
5. ಪೋಲೀಸ್ ಪಾಸ್
6. ಹೋಮ್ ಗಾರ್ಡ್ಸ್

ಆ) ಈ ರಿಯಾಯಿತಿ ಪಾಸ್‌ಗಳಿಂದ ಆಗುತ್ತಿರುವ ವಾರ್ಷಿಕ ಹೊರೆ 1996-97ನೇ ಸಾಲಿಗೆ 105.52 ಕೋಟಿ ರೂ.ಗಳು.

ಇ) ರಿಯಾಯಿತಿ ಪಾಸ್‌ಗಳಿಗೆ 1996-97ನೇ ಸಾಲಿಗೆ ರಾಜ್ಯ ಸರ್ಕಾರವು ರೂ. 36.20 ಕೋಟಿ ರೂ.ಗಳನ್ನು ಮರುಪಾವತಿ ಮಾಡಿರುತ್ತದೆ. ಪೋಲೀಸ್ ಇಲಾಖೆಯಿಂದ 82 ಕೋಟಿ ರೂ. ಗಳು ಮರು ಪಾವತಿಯಾಗಬೇಕಿದೆ.

ಈ) 1996-97ನೇ ಸಾಲಿನ ರಿಯಾಯಿತಿ ಪಾಸ್‌ಗಳ ಒಟ್ಟು ಮೊತ್ತ ರೂ. 105.52 ಕೋಟಿ ಆಗಿರುತ್ತದೆ.

ಉ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಿಯಾಯಿತಿ ಪಾಸ್‌ಗಳ ಸಂಪೂರ್ಣ ವೆಚ್ಚವನ್ನು ಪಡೆಯಲು ಸರ್ಕಾರಕ್ಕೆ ಒತ್ತಾಯಿಸಿದೆ.

ಊ) ಇಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಕೆಎಸ್‌ಆರ್‌ಟಿಸಿಯವರು ವಿದ್ಯಾರ್ಥಿಗಳ ಪಾಸು, ಪತ್ರಕರ್ತರ ಪಾಸು, ಸ್ವಾತಂತ್ರ್ಯ ಹೋರಾಟಗಾರರ ಪಾಸನ್ನು ಕೊಟ್ಟಿದ್ದಾರೆ. ಇದರಿಂದ ಕೆಎಸ್‌ಆರ್‌ಟಿಸಿಗೆ 150 ಕೋಟಿ ರೂಪಾಯಿ ಕೊರತೆಯಾಗುವುದನ್ನು ಸರ್ಕಾರ ತುಂಬಿಕೊಡುತ್ತದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಈ ನಿಮ್ಮ ಕೆಎಸ್‌ಆರ್‌ಟಿಸಿ ಆಗುವ ಕೊರತೆಯನ್ನು ಅಡ್ಜೆಸ್ಟ್ ಮಾಡಿಕೊಳ್ಳಲು ಹೆಚ್ಚಿನ ದರವನ್ನು ಪ್ರಯಾಣಿಕರ ಮೇಲೆ ಹಾಕುತ್ತೀರಿ. ಕೆಎಸ್‌ಆರ್‌ಟಿಸಿಗೆ ಆಗಿರುವ 300 ಕೋಟಿ, 400 ಕೋಟಿ, 500 ಕೋಟಿ ಲಾಸನ್ನು ತುಂಬುವುದಕ್ಕೆ ದರವನ್ನು ಏರಿಸಿದರೆ ಸರಿ ಹೋಗುತ್ತದೆ ಎಂದು ಹೇಳಿದ್ದಾರೆ. ಸರ್ಕಾರದಿಂದ ಎಷ್ಟು ವರ್ಷದ ಬಾಕಿ ಬರಬೇಕಾಗಿದೆ? ಈ ವರ್ಷ 108 ಕೋಟಿ ಲಾಸ್ ಎಂದು ಹೇಳಿದ್ದಾರೆ. ಪಾಸು ಕೊಡುವುದರಿಂದ ಬಹಳಷ್ಟು ನಷ್ಟವಾಗಿದೆ. ಸರ್ಕಾರದವರು ಇದಕ್ಕೆ ಏನಾದರೂ ಪರಿಹಾರ ಕೊಡುತ್ತಾರಾ? ಆಮೇಲೆ ಪತ್ರಕರ್ತರು ಮತ್ತು ಪ್ರಯಾಣಿಕರಿಗೆ ಈ ಪುಷ್ಪಕ್‌ನಲ್ಲಿ ಪ್ರಯಾಣ ಮಾಡುವುದಕ್ಕೆ ಪಾಸ್ ಕೊಡುವ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೆ, ಸಾರಿಗೆ ಸಂಸ್ಥೆಯಲ್ಲಿ 1984-85ರಿಂದ ಈ ಒಂದು ರಿಯಾಯಿತಿ ದರದಲ್ಲಿ ವಿದ್ಯಾರ್ಥಿಗಳಿಗೆ ಪಾಸು ಕೊಡತಕ್ಕಂಥ ವ್ಯವಸ್ಥೆ ಬಂದಿದೆ. ಇದರಲ್ಲಿ ಒಂದು ವಿವರವನ್ನು ಮಾನ್ಯ ಸದಸ್ಯರಿಗೆ ಕೊಡಲು ಬಯಸುತ್ತೇನೆ.

The number of passes issued for the blind -5,500

The number of passes issued to Home Guards on special duty -550

The number of passes issued to journalists -850

The number of passes issued to police personnel (with uniform) -3850

ಒಟ್ಟು 5500 ಜನಕ್ಕೆ ನಾವು ಇಡೀ ರಾಜ್ಯದಲ್ಲಿ ಕೊಟ್ಟಿದ್ದೇವೆ. ಹೋಮ್‌ಗಾರ್ಡ್ಸ್‌ನಲ್ಲಿ ವಿಶೇಷ ಕರ್ತವ್ಯ ಮಾಡುವವರಿಗೆ 550 ಜನರಿಗೆ ಪಾಸ್ ಕೊಟ್ಟಿದ್ದೇವೆ. ಇಡೀ ರಾಜ್ಯದಲ್ಲಿ 850 ಪತ್ರಕರ್ತರಿಗೆ ಪಾಸ್ ಕೊಟ್ಟಿದ್ದೇವೆ. ಆಮೇಲೆ 3850 ಜನ ಸಮವಸ್ತ್ರ ಧರಿಸುವ ಪೊಲೀಸ್ ಅಧಿಕಾರಿಗಳು ಬೆಂಗಳೂರಿನ ನಗರ ಸಾರಿಗೆಯಲ್ಲಿ ಓಡಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಮವಸ್ತ್ರ ಧರಿಸದೆ ಓಡಾಡುವಂತಹ 2876 ಜನ ಪೊಲೀಸ್ ಅಧಿಕಾರಿಗಳಿಗೆ ತಲಾ 50 ರೂ.ಗಳಂತೆ ಪಡೆದು ಪಾಸ್ ಕೊಡಲಾಗಿದೆ. ಇಡೀ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ 5,92,244 ಪಾಸನ್ನು ಕೊಟ್ಟಿದ್ದೇವೆ. ಎಲ್ಲಾ ಸೇರಿಸಿದರೆ ಒಟ್ಟು ಸುಮಾರು 6 ಲಕ್ಷದ 6 ಸಾವಿರ ಜನರಿಗೆ ಪಾಸ್ ಕೊಟ್ಟಿದ್ದೇವೆ. ಇದರಲ್ಲಿ ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ಪಾಸ್ ಬಾಬ್ತು ಸರ್ಕಾರವು ಕೆಎಸ್‌ಆರ್‌ಟಿಸಿ ಸಂಸ್ಥೆಗೆ 35 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ತುಂಬಿ ಕೊಡುತ್ತಾ ಬಂದಿದೆ. ಈ ವರ್ಷ ರಸ್ತೆ ಸಾರಿಗೆ ಆಡಳಿತ

ಮಂಡಳಿಯವರು, ಮುಖ್ಯಮಂತ್ರಿಗಳಿಗೆ ಮತ್ತು ಹಣಕಾಸಿನ ಮಂತ್ರಿಗಳಿಗೆ ಒತ್ತಾಯ ಮಾಡಿ ಈ ವರ್ಷದ ಬಡ್ಜೆಟ್‌ನಲ್ಲಿ 45 ಕೋಟಿ ರೂಪಾಯಿಗಳನ್ನು ಸ್ಟೂಡೆಂಟ್ಸ್ ಕನ್ಸೆಷನ್ ಸಂಬಂಧದಲ್ಲಿ ಕೊಡಬೇಕು ಎಂದು ಒತ್ತಾಯ ಮಾಡಿದ ಮೇರೆಗೆ ಈ 45 ಕೋಟಿ ಹಣವನ್ನು ಕೊಡಲು ಸರ್ಕಾರ ನಿರ್ಧಾರ ಮಾಡಿದೆ. ಪತ್ರಕರ್ತರಿಗೆ ಕೊಡುತ್ತಿರುವ ಪಾಸ್‌ಗಳ ಬಾಬ್ತು ಸುಮಾರು ನಾಲ್ಕುವರೆ ಲಕ್ಷ ರೂಪಾಯಿ ಖರ್ಚು ಆಗುತ್ತಿದೆ. ಆ ಹಣವನ್ನು ಸರ್ಕಾರದವರೇ ಸಂಪೂರ್ಣವಾಗಿ ಸಾರಿಗೆ ಸಂಸ್ಥೆಯವರಿಗೆ ಕೊಡುತ್ತಾ ಇದ್ದಾರೆ. ಇದರ ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುತ್ತಾ ಇರತಕ್ಕಂಥ ಪಾಸ್‌ಗಳ ಬಾಬತ್ತಿನ ಹಣವನ್ನೂ ಸಹ ಸರ್ಕಾರವೇ ಕೊಡುತ್ತಾ ಇದೆಯೇ ಹೊರತು ಬಾಕಿ ಎಲ್ಲಾ ಖರ್ಚನ್ನು ಸಹ ಸರ್ಕಾರವೇ ಕೊಡುತ್ತಾ ಇದೆ. ಸಾರಿಗೆ ಸಂಸ್ಥೆಯ ಮೇಲೆ ಇದು ಬರ್ಡನ್ ಆಗುತ್ತಿದೆಯೆಂದು ತಾವು ಹೇಳುತ್ತಿದ್ದೀರಿ. ಅದು ಸರಿಯಲ್ಲ. ಈ ವರ್ಷದಲ್ಲಿ 105 ಕೋಟಿ ರೂಪಾಯಿ ಸಾರಿಗೆ ಸಂಸ್ಥೆಯವರಿಗೆ ಹೊರೆಯಾಗುವುದರಲ್ಲಿ50 ಪರ್ಸೆಂಟ್ ಗಿಂತ ಹೆಚ್ಚು ಹಣವನ್ನು ಕೆಎಸ್‌ಆರ್‌ಟಿಸಿಗೆ ಸರ್ಕಾರ ಕೊಡುತ್ತದೆ. ಇನ್ನು ಉಳಿದ50 ಪರ್ಸೆಂಟ್ ಬರ್ಡನ್‌ನ್ನು ಅವರೇ ಬೇರ್ ಮಾಡಬೇಕಾಗುತ್ತದೆಂದು ಸರ್ಕಾರದ ನಿರ್ಧಾರವಾಗಿದೆ. ಇದರಿಂದ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತದೆಂದು ನಾನು ತತ್ವಶಃ ಒಪ್ಪುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಪುಷ್ಪಕ್ ಬಸ್ಸಿನಲ್ಲಿ ಓಡಾಡುವುದಕ್ಕೆ ಪಾಸ್ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪತ್ರಕರ್ತರಿಗೆ ವಿಶೇಷವಾಗಿ ಕೊಡುತ್ತಿರುವ ಪಾಸ್‌ಗಳ ಹಣವನ್ನು ಸರ್ಕಾರವೇ ವಾರ್ತಾ ಮತ್ತು ಪ್ರಸಾರ ಇಲಾಖೆ ಮೂಲಕ ರಸ್ತೆ ಸಾರಿಗೆ ಸಂಸ್ಥೆಗೆ ಕೊಟ್ಟು ಬಿಡುತ್ತಿದೆ. ಇದರ ಬಗ್ಗೆ ವಾರ್ತಾ ಇಲಾಖೆಯವರು ಕೊಡುವುದಕ್ಕೆ ಒಪ್ಪಿಕೊಂಡರೆ ಸಾರಿಗೆ ಸಂಸ್ಥೆಯವರಿಗೆ ಹೇಳಿ ಮಾಡಿಸಬಹುದು. ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಬದಾಮಿ ತಾಲ್ಲೂಕಿನಲ್ಲಿ ತೋಟಗಾರಿಕೆ ಅಭಿವೃದ್ಧಿ

581 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನಲ್ಲಿ ಭೂಮಿ ನೀರು, ತೋಟಗಾರಿಕೆ ಬೆಳೆಗೆ ಯೋಗ್ಯವಾಗಿದ್ದರೂ, ಹಿಂದುಳಿದಿರುವಿಕೆಗೆ ಕಾರಣಗಳೇನು?

ಆ) ಸರ್ಕಾರವು ತೋಟಗಾರಿಕೆ ಅಭಿವೃದ್ಧಿಗೆ ಹಾಗೂ ಸಂಸ್ಕರಣ ಮಾರಾಟಕ್ಕೆ ಉತ್ತೇಜನ ಕೊಟ್ಟು ಪ್ರೋತ್ಸಾಹಿಸುತ್ತಿದೆಯೇ?

ಇ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳ ಮೂಲಕ ಪ್ರೋತ್ಸಾಹ ನೀಡಲಾಗುವುದು?